ಇದೇ ಸಂದರ್ಭದಲ್ಲಿ ಶಿವಾನಂದನಿಗೆ ಹೆಣ್ಣು ನಿಶ್ಚಯವಾಯಿತು. ಪಕ್ಕದ ಸಾವಂತವಳ್ಳಿ ಹುಡುಗಿ. ಅದಾಗಲೇ ಆಂಜನೇಯಪ್ಪ ಮೇಷ್ಟ್ರು ಬದುಕಿದ್ದಾಗಲೇ ಮುಳಬಾಗಿಲಿನ ವೆಂಕಟೇಶಯ್ಯ ಎನ್ನುವವರ ಮಗಳೊಂದಿಗೆ ಶ್ರೀಕಂಠನ ಮದುವೆ ಆಗಿತ್ತು. ಆತ ಹೆಂಡತಿಯೊಂದಿಗೆ ತನ್ನ ಮಾವನ ಮನೆಯಲ್ಲಿದ್ದ.

ಇನ್ನೇನು ಶಿವಾನಂದ ಮತ್ತು ಮೀರಾಳ ಮದುವೆ ನಿಶ್ಚಿತಾರ್ಥ ನಡೆಯಬೇಕು, ನಿಶ್ಚಿತಾರ್ಥ ಎಂಟು ದಿನ ಇದೆ ಎನ್ನುವಾಗಲೇ ಆ್ಯಕ್ಸಿಡೆಂಟ್ ಒಂದರಲ್ಲಿ ಶಿವಾನಂದ ತೀರಿಕೊಂಡ. ತುಮಕೂರಿನಿಂದ ತನ್ನ ಗೆಳೆಯನ ಬೈಕ್‌ನಲ್ಲಿ ತ್ಯಾಮಗೊಂಡ್ಲುವಿಗೆ ಬರುತ್ತಿದ್ದಾಗ ಲಾರಿಯೊಂದು ವೇಗವಾಗಿ ಬಂದು ಬೈಕ್‌ಗೆ ಡಿಕ್ಕಿ ಹೊಡೆಯಿತು. ಬೈಕ್‌ನ ಹಿಂಬದಿ ಕುಳಿತಿದ್ದ ಶಿವಾನಂದ ಆಯ ತಪ್ಪಿ ಕೆಳಗೆ ಬಿದ್ದ. ಆತನ ತಲೆಗೆ ಕಲ್ಲೊಂದು ಹೊಡೆಯಿತು. ಸ್ಪಾಟ್ ಡೆತ್.

'ಆವೊತ್ತಿನಿಂದ ಈ ಮೀರಾ ನಮ್ಮ ಮನೆಯಲ್ಲಿ ನನ್ನ ಜೊತೆಯೇ ಇದ್ದಾಳೆ. ಮೊನ್ನೆ ಮೊನ್ನೆಯವರೆಗೆ ತಾನು ಮದುವೆ ಆಗುವುದಿಲ್ಲ ಎನ್ನುತ್ತಿದ್ದಳು. ಈಗ ಹೇಗೋ ಒಪ್ಪಿದ್ದಾಳೆ. ಮ್ಯಾಟ್ರಿಮೋನಿಯಲ್ ಅಂತ ಬರುತ್ತದಲ್ಲಾ ಅದರಲ್ಲಿ ಇವಳ ಫೋಟೋ ಮತ್ತು ವಿವರ ಹಾಕಿಸಿದ್ದೇನೆ. ಎರಡ್ಮೂರು ಕಡೆಯಿಂದ ಸಂಬಂಧ ಕೇಳಿ ಬಂದಿದೆ. ಅದರಲ್ಲಿ ಯಾವುದೂ ನನಗೆ ಒಪ್ಪಿಗೆ ಆಗಿಲ್ಲ.'

ಹೇಮಾ ಹೇಳುತ್ತಿದ್ದಂತೆ ನನ್ನ ಸೆಲ್ ಫೋನ್ ರಿಂಗಾಯಿತು. 'ಹಲೋ...' ಅಂದೆ.

'ಎಲ್ಲಿದೀಯಾ ಅಪ್ಪಾ?' ಎಂದು ಕೇಳಿದ ಮಗಳು ನನ್ನ ಉತ್ತರಕ್ಕೂ ಕಾಯದೆ, 'ಅಣ್ಣ ಚೆನ್ನೈನಿಂದ ಬಂದಿದ್ದಾನೆ. ಮದುವೆ ಆಗುವುದಕ್ಕೆ ಸಿದ್ಧನಾಗಿದ್ದಾನೆ. ಹೆಣ್ಣನ್ನೂ ಆಯ್ಕೆ ಮಾಡಿಕೊಂಡಿದ್ದಾನೆ. ಇದೇ ಈಗ ನಾವು... ನಾವು ಅಂದರೆ ನಾನು, ಅಣ್ಣ, ಇವರು... ಮತ್ತೆ ಮೂರು ಮಂದಿ ಆಗುತ್ತೇವಲ್ಲಾ ಅಂತೆ ನಮ್ಮ ಪಕ್ಕದ ಮನೆಯ ಸೀತಾ ಆಂಟಿಯನ್ನೂ ನಮ್ಮ ಜೊತೆ ಕರೆದುಕೊಂಡು ಹೆಣ್ಣು ನೋಡಲು ಹೊರಟಿದ್ದೇವೆ. ಎದುರು ಮನೆ ಪೈ ಅಂಕಲ್‌ಗೆ ಮನೆ ಕೀಲಿ ಕೊಟ್ಟಿದ್ದೇನೆ... ನೀನು ಬಂದ ಕೂಡಲೇ ಅವರನ್ನು ಕೇಳು' ಎಂದಳು ಬಡಬಡನೆ.

'ಯಾವ ಊರಿನ ಹುಡುಗಿ? ಎಲ್ಲಿಗೆ ಹೋಗ್‌ತಿರೋದು ನೀವು?' ನಾನು ಕೇಳಿದೆ. 'ತುಮಕೂರು ಸಮೀಪದಲ್ಲಿ... ತ್ಯಾಮಗೊಂಡ್ಲು ಅಂತ ಒಂದು ಊರು. ಆ ತ್ಯಾಮಗೊಂಡ್ಲು ಸಮೀಪದಲ್ಲಿ ಮಾಚೇನಹಳ್ಳಿ ಅಂತ... ಆ ಮಾಚೇನಹಳ್ಳಿಯ ಹೇಮಾ ಅನ್ನುವವರ ಮನೆಗೆ... ಹೇಮಾ ಅವರ ಮನೆಯಲ್ಲಿರೋ...' ಮಗಳು ಕೊಡುತ್ತಿದ್ದ ವಿವರಣೆ ಪೂರ್ಣಗೊಳ್ಳುವ ಮೊದಲೇ ನಾನು, 'ಮೀರಾ ಎನ್ನುವ ಹುಡುಗಿಯನ್ನು ನೋಡಲು' ಎಂದೆ.

'ಹೌದಾ!?... ನಿಂಗೆ ಆ ಮೀರಾ ಗೊತ್ತಾ?!'

'ಗೊತ್ತಿರೋದೇನು?... ನಾನೀಗ ಆ ಹೇಮಾಳ ಮನೆಯಲ್ಲಿಯೇ ಇದ್ದೇನೆ. ಮೀರಾಳನ್ನು ನಾನು ನೋಡಿಯೂ ಆಯಿತು. ನನಗೆ ಒಪ್ಪಿಗೆಯೂ ಆಯಿತು. ಇನ್ನೇನಿದ್ದರೂ ನೀನು, ನಿನ್ನ ಗಂಡ, ನಿನ್ನ ಅಣ್ಣ ಒಪ್ಪಿದರಾಯಿತು' ಎಂದೆ.

ಮೀರಾಳ ಕೆನ್ನೆಗಳು ಕೆಂಪೇರಿದ್ದವು.

### ಟಿ.ಎಂ. ಸುಬ್ಬರಾಯ

ಲೇಖಕರು ಶಿರಸಿಯ 'ಆವೇ ಮರಿಯಾ' ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರು. ಈ ತನಕ 75 ಕಾದಂಬರಿಗಳು, 10 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಲೇಖನಗಳ ಸಂಗ್ರಹಗಳು, ಸಂಶೋಧನಾ ಕೃತಿಗಳು, ಪ್ರವಾಸ ಕಥನಗಳು, ಯಕ್ಷಗಾನ ಪ್ರಸಂಗಗಳನ್ನು ಕೂಡ ಪ್ರಕಟಿಸಿದ್ದಾರೆ. ಅಂಕಣ ಬರಹಗಳನ್ನೂ ಬರೆದಿದ್ದಾರೆ.